ಯಾದಿಯೂ, ಲಗ್ನ ಪತ್ರವೂ ಒಂದೊಂದಾಗಿ ದಿನದಿಂದ ದಿನಕ್ಕೆ ಒತ್ತಡವೂ, ರೊಕ್ಕದ ಅಡಚಣೆಯೂ ಹೆಚ್ಚಾಗುತ್ತ ಹೋಗಿತ್ತು.

ಆಕೆ ಹೇಳಲೇಬೇಕಾದ ಗೆಳತಿ ಶೈಲಾ ಹೊಸದಾಗಿ ಕೆಲಸಕ್ಕೆ ಸೇರಿದ್ದ ನಿಮಿತ್ತವಾಗಿ ಬೆಂಗಳೂರಿಗೆ ಹೋಗಿರಲಾಗಿ ಮಾತು ಮರೆತವಳ ಹಾಗೆ ಅವಳ ಆಪ್ತ ಸಂಗಾತಿಗಳಾದ ಗುಲಾಬಿ, ದಾಸಾಳ, ಮಲ್ಲಿಗೆಯರ ಮುಂದೆ ಗಂಟೆಗಟ್ಟಲೇ ಕೂಡುತ್ತಿದ್ದಳು. ಬಾವಿಯ ನೀರಿನೊಂದಿಗೆ ಕತ್ತಲನ್ನು ಜೊತೆಮಾಡಿಕೊಂಡು ಆ ಸುರಂಗದ ಆಳವನ್ನು ಈಗಿರುವ ಮೂರುಪಟ್ಟು ಹೆಚ್ಚು ಮಾಡಿಕೊಂಡು ಅಲ್ಲೆಲ್ಲೋ ಅಡಗಿರಬಹುದಾದ ಬೇರೊಂದು ಪ್ರಪಂಚದ ನೆರಳನ್ನು ಸೇರಿಬಿಡುವಷ್ಟು ಮೂಕಿಯಾಗಿದ್ದಳು. ಆಕೆಯೇ ಬೇರು ನೆಟ್ಟು ಬೆಳಸಿದ್ದ ಹೂಗಿಡಗಳು ಕನಿಷ್ಠ ಬೇಸಿಗೆಗಾದರೂ ಬಾಡಬೇಕಿತ್ತಲ್ಲ... ತಾನಾಗ ನೀರುಣಿಸಿ ಬದುಕಿಸಿಕೊಳ್ಳುವ, ಮೇಲುಹೊದಿಕೆಯಾಗಿ ಚಪ್ಪರಕಟ್ಟಿ ನೆರಳು ಮಾಡುವ ಇಲ್ಲಾ ಮಣ್ಣು ಹದಮಾಡಿ ಬುಡದಲ್ಲಿ ಹಸಿಮಾಡುವ ಯಾವ ಕೆಲಸವೂ ಈಗ ಆಕೆಯದ್ದಾಗಿರಲಿಲ್ಲ. ತಮ್ಮನನ್ನು ಮದುವೆಯಾಗಲಿರುವ ಆ ಹುಡುಗಿಗೆ ಈ ಕೈತೋಟದ ಮೇಲೆ ಆಗಲೇ ಒಲವು ಬಂದಿತ್ತು. ಆಕೆಯೇ ಮುಂದಾಗಿ ನೀರುಣಿಸಿ ಅವನೊಡನೆ ಸೇರಿಕೊಂಡು ಚಪ್ಪರವನ್ನೂ ಕಟ್ಟಿಬಿಟ್ಟಿದ್ದಳು. ಇನ್ನೇನು ವಾರೊಪ್ಪತಿನಲ್ಲಿ ಅರಿಸಿನ ಮೈಯ ಮದುವಣಗಿತ್ತಿಯಾಗಿ, ಅರಿಸಿನ ಸೀರೆಯುಟ್ಟು ಹಸೆಮನೆಗೆ ಹತ್ತಿ ಸುರುಗಿ ನೀರು ಹಾಕಿಸಿಕೊಂಡು ಶಾಸ್ತ್ರೋಕ್ತವಾಗಿ ಇನ್ನೊಬ್ಬನ ಸೊತ್ತಾಗುವುದು ಪರಿಪರಿಯಾಗಿ ಕಾಡುತ್ತಿತ್ತು.

ಮುಂದೆಮಾಡಿಕೊಂಡಿದ್ದ ಹಿತ್ತಲಬಾಗಿಲು ಕೊಂಚ ಜರುಗಿ ಕೀಲೆಣ್ಣೆ ಕಾಣದ ಭಾಗ್ಯಕ್ಕೆ ಕೊರ್ರೋ ಅಂತ ಸದ್ದು ಮಾಡಿತು. ಹಿಂದಿನಿಂದ ಬರುತ್ತಿದ್ದವನಿಗೆ 'ಇಲ್ಲಿ ಬಾರಪಾ... ಬಾಗಲ ಸಣ್ಣದೈತಿ ಬಗ್ಗಿ ಹೋಗು' ಅಂತ ಅವ್ವ ವರಮಹಾಶಯನನ್ನು ಹಿತ್ತಲಿಗೆ ಬಿಟ್ಟು... 'ಶಾರವ್ವಾ... ಹಿತ್ತಲದಾಗ ಏನ ಮಾಡತೀ... ಒಂದೀಟ ಒಳಗ ಬಂದು ಹ್ವಾರೇಕ ಕೈ ಹಾಕಬಾರದೇನಬೇ... ಅಳಿಯಾರ ಬಂದಾರ ನೋಡು. ಮಾತಾಡಿ ಲಗ್ಗ ಒಳಗ ಬಾ... ಅವರಿಗೆ ಜ್ಯೂಸ್ನಾರ ಮಾಡಾಕತ್ತಿ...' ಮಾತಾಡುತ್ತ ಒಳಗೆ ಹೋದಳು. ಹೌದು ಅವ್ವಳಿಗೆ ಕೈತುಂಬ ಕೆಲಸ ಇದ್ದವು. ಲಗ್ನ ಠರಾಯಿಸಿದಾಗಿಂದ ಪುರುಸೊತ್ತೆ ಇದ್ದಿರಲಿಲ್ಲ.

ಹಿತ್ತಲಿಗೆ ಬಂದವ ನಕ್ಕ. ಇವಳ ತುಟಿಯಂಚಲ್ಲಿ ನಗುವೇನೂ ಮೂಡಲಿಲ್ಲ. ಉಸಿರಿನಲ್ಲಿ ಕಾವು ಹೆಚ್ಚಿದಂತೆ ಆತಂಕವಾಯ್ತು. 'ಲಗ್ಗಣ ಪತ್ರಾ ಕೊಡಾಕ ನಂದಗಾಂಕ ಬಂದಿನ್ನಿ... ಹಂಗ ಭೆಟ್ಟಿಯಾಗಿ ಮಾತಾಡಸೂಣು ಅನಸ್ತು' ಇಬ್ಬರ ನಡುವೆ ಮತ್ತೊಂದಷ್ಟು ಮೌನದ ರಾಶಿಯೇ ಕಡಿದುಕೊಂಡು ಬಿತ್ತು.

'ಮತ್ತ ಎಲ್ಲಾ ಛಲೋ ನಡದೈತೆಲಾ... ಯಾಕ ನನ್ನ ಕೂಡ ಮಾತಾಡಂಗಿಲ್ಲೇನು...'

'ಏನ ಮಾತಾಡೋದು?...'

'ಹಂಗಾರ ನಾ ಬರತೇನಿ... ಮತ್ತ ನಿನಗಂತ ಹೊಸಾ ಮೊಬೈಲ್ ತಂದೀನಿ... ಸಿಮ್ಮು ಐತಿ... ತಗೊ...'

'ನನಗ ಮೊಬಾಯಿಲ್ ಸೇರೂದಿಲ್ಲ.... ನೀವ ಇಟಗೋರಿ...'

'ಹಂಗನಬ್ಯಾಡಾ ಇದು ನಾನು ನಿನಗಾಗಿ ಕೊಡಸತಿರೋ ಒನ್ನೇ ಗಿಫ್ಟ್... ಒಲ್ಲೆನಬಾರದು...' ಮೊಬೈಲ್ ಕೊಡುವ ಆತುರದಲ್ಲಿ ಅವನ ಕೈ ಇವಳ ಹೆಗಲಮೇಲಿತ್ತು. ಬಹುಶಃ ಅವನ ಉಸಿರು ಬಿಸಿಯಾಗಿತ್ತು ತಾಳ ತಪ್ಪಿದಂತೆ ಇಬ್ಬರ ಎದೆಬಡಿತ ಜೋರಾದಂತೆ